

ಮಾಡುವಷ್ಟರಲ್ಲಿ, ಮತ್ತೊಮ್ಮೆ ಧೃಢವಾಗಿ 'ಮಾವ ನೀವು ಹೊರಡಿ...' ಎಂದಳು.

ಸೂರ್ಯ ಬಿಲ್ ಕಟ್ಟಿ ಬಂದಿದ್ದ. ಮಕ್ಕಳು ಅಳು ಬಾರದೇ, ಪೆಚ್ಚು ಪೆಚ್ಚಾಗಿ ಮಾವನ ಹಿಂದೆ ನಡೆಯುತ್ತಿದ್ದವು. ಕುಸುಮಾ ಜಾನುಗೆ ಮೆತ್ತಗೆ, 'ನಾನೂ ಮನೆಗೆ ಹೋಗ್ಲಾ, ನಂಗೆ ಆಂಬುಲೆನ್ಸ್‌ನಲ್ಲಿ ಬರೋಕೆ ಭಯ ಆಗತ್ತೆ' ಎಂದಿದ್ದಳು.

'ಹ್ಞೂ, ಹೋಗು, ಅದೇನೇನು ಬೇಕೋ ರೆಡಿ ಮಾಡ್ಕೊ, ದೀಪ, ಸೀರೆ ಏನೇನು ಅಂತ ಕೇಳ್ಕೊ ಅಲ್ಲಿ ಬಂದೋರನ್ನ' ಆಂಬುಲೆನ್ಸ್‌ನಲ್ಲಿ ಬರಲು ಇನ್ನಾರೂ ಉಳಿದಿರಲಿಲ್ಲ. ಸೂರ್ಯ ಡ್ರೈವರ್‌ಗೆ ತನ್ನನ್ನು ಫಾಲೋ ಮಾಡುವಂತೆ ಹೇಳಿ ಬೈಕ್ ಹತ್ತಿದ. ಜಾನು ಆಂಬುಲೆನ್ಸ್ ಹತ್ತಿದಳು. ಒಳಗೆ ಪದ್ದಮ್ಮ ತಣ್ಣಗೆ ಮಲಗಿದ್ದರು. ಪಕ್ಕದಲ್ಲಿ ಕೂತ ಜಾನು ಪದ್ದಮ್ಮನ ಹಣೆ ನೇವರಿಸಿದಳು.

* * *

ಆರು ತಿಂಗಳಿನಿಂದ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದರು ಪದ್ದಮ್ಮ. ಇದಕ್ಕೆ ಶಾಶ್ವತ ಪರಿಹಾರ ಇಲ್ಲ, ಹೆಚ್ಚೆಂದರೆ ಮೂರರಿಂದ ಐದು ವರ್ಷ ಬದುಕಬಹುದಷ್ಟೇ ಎಂದಿದ್ದರು ಡಾಕ್ಟರ್. ಸೂರ್ಯ ಎಲ್ಲಾ ಡಾಕ್ಟರ್‌ಗಳ ಹತ್ತಿರ ತೋರಿಸಿದಾಗಲೂ ಎಲ್ಲರೂ ಅದನ್ನೇ ಹೇಳಿದ್ದರು. ಮಗಳು ಕುಸುಮಾ ಪ್ರತಿ ವಾರ ಬಂದಾಗಲೂ ಒಂದೊಂದು ಹೊಸ ಡಾಕ್ಟರ್ ಪಟ್ಟಿ ತರುತ್ತಿದ್ದಳು. ಎಲ್ಲಿ ತೋರಿಸಿದರೂ ಪದ್ದಮ್ಮನಿಗೆ ವಾಸಿಯಾಗುವುದಿಲ್ಲ ಎಂದಿದ್ದರು. ನಿಯಮಿತವಾದ ದೈಹಿಕ ವ್ಯಾಯಾಮ, ಆಹಾರ ಸೇವನೆಯಿಂದ ಇದ್ದಷ್ಟು ದಿನ ಸ್ವಲ್ಪಮಟ್ಟಿಗೆ ಗಟ್ಟಿಯಾಗಿರಬಹುದು ಎಂದಿದ್ದರು.

ಪದ್ದಮ್ಮನಿಗೆ ಇಬ್ಬರೇ ಮಕ್ಕಳು. ಸೂರ್ಯ ಮತ್ತು ಕುಸುಮಾ. ಪದ್ದಮ್ಮನ ಗಂಡ ಶಂಕರಪ್ಪ ಇದ್ದ ಒಳ್ಳೆ